ಬೆಂಕಿ ಉಗುಳುವ ಅಗ್ನಿಪರ್ವತದ ತರಹ ಮಾತಿನಲ್ಲಿ ಹೊರ ಬರುತ್ತಲೇ ಇತ್ತು. ಆಕೆ ಡೈರೆಕ್ಟರು, ಪ್ರೊಡ್ಯೂಸರು, ಪ್ರೊಡಕ್ಷನ್ ಮ್ಯಾನೇಜರು ಎಲ್ಲರನ್ನೂ ವಾಚಾಮಗೋಚರವಾಗಿ ತನ್ನದೇ ಸ್ವಂತ ಶೈಲಿಯಲ್ಲಿ ಬಯ್ಯುತ್ತಿದ್ದಳು. ಸುಕನ್ಯಾ ಅಂದಿನ ಅತ್ಯಂತ ಫೇಮಸ್ ಫಿಮೇಲ್ ಸ್ಟಾರ್ ಆಗಿದ್ದಳು. ಆಕೆಯ ಅಮ್ಮ ಕೋಪಿಸಿಕೊಂಡರೆ ಪ್ರೊಡ್ಯೂಸರುಗಳು ನಾಶವೇ ಸರಿ.

ಆಗಿದ್ದು ಇಷ್ಟೇ. ಈ ಸಿನಿಮಾದ ಕೊನೆಯಲ್ಲಿ ಹೀರೊಯಿನ್ ಸಾಯುತ್ತಾಳೆ. ಆಕೆಯ ಚಿತೆಗೆ ಬೆಂಕಿಯನ್ನಿಟ್ಟ ಹೀರೊ, ಆಕೆಯ ಸಾವಿಗೆ ಸೇಡು ತೀರಿಸಿಕೊಳ್ಳುವ ಶಪಥ ಮಾಡುತ್ತಾನೆ, ಧಗಧಗಿಸುತ್ತಿರುವ ಚಿತೆಯ ಬೆಂಕಿಯ ಶಾಟ್ ಫ್ರೀಜ್ ಆಗುತ್ತೆ, ಅದರ ಮೇಲೆ "ಶುಭಂ" ಎಂದು ಬರುವ ಬದಲು, "ಇನ್ನೂ ಇದೆ" ಎಂದು ಬರುತ್ತದೆ. ಡೈರೆಕ್ಟರ್ ಅವರ ಈ ಟೋಟಲಿ ಡಿಫರೆಂಟ್ ಐಡಿಯಾ ಪ್ರೊಡ್ಯೂಸರರಿಗೆ ಬಹಳ ಮೆಚ್ಚುಗೆ ಆಗಿತ್ತು.

ಆದರೆ, ಉಳಿದಿರುವ ಇದೊಂದೇ ಕ್ಲೈಮ್ಯಾಕ್ಸ್ ದೃಶ್ಯದ ಚಿತ್ರೀಕರಣದ ವೇಳೆಯಲ್ಲಿ ಜೋರು ಜಗಳ ಶುರುವಾಯಿತು. ಡೈರೆಕ್ಟರ್ ಅಂದುಕೊಂಡಂತೆ, ಹೀರೊಯಿನ್ ಸುಕನ್ಯಾ ಚಿತೆಯ ಮೇಲೆ

